



ಅರುಣ ಪಿ. ಭಟ್ಟ

## ವಾರಭವಿಷ್ಯ: 16.01.2025ರಿಂದ 22.01.2025ರವರೆಗೆ




ನಿಮ್ಮ ಬೌದ್ಧಿಕ ಶಕ್ತಿಯಿಂದ ವಿಶೇಷ ಗೌರವಕ್ಕೆ ಪಾತ್ರರಾಗುತ್ತೀರಿ. ಮಕ್ಕಳು ಯಶಸ್ಸು ಪಡೆಯಲು ಪ್ರೋತ್ಸಾಹ ನೀಡಲಿದ್ದೀರಿ. ಹಣಕಾಸು ವಿಚಾರದಲ್ಲಿ ಪ್ರಗತಿ. ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಸಮಸ್ಯೆಗಳು ಎದುರಾಗಬಹುದು. ಪ್ರತಿಸ್ಪರ್ಧಿಗಳು ನಿಮ್ಮನ್ನು ಮಣಿಸಲು ಬಹಳ ಶ್ರಮಿಸುತ್ತಾರೆ. ಉದ್ಯೋಗ ವ್ಯವಹಾರದಲ್ಲಿ ಉನ್ನತ ಸ್ಥಾನ ಪಡೆದುಕೊಳ್ಳುವ ಯೋಗ ಇದೆ. ಶುಭದಿನ: 16. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.




ಜೀವನ ಮಟ್ಟ ಮೇಲಕ್ಕೆ ಏರಲಿದೆ. ಮನೆಗೆ ದುಬಾರಿ ವಿಲಾಸಿ ವಸ್ತುಗಳನ್ನು ಖರೀದಿಸುವ ಯೋಗ ಇದೆ. ಚೈತನ್ಯ, ದೈಹಿಕ ಕ್ಷಮತೆ ಹೆಚ್ಚಾಗಲಿದೆ. ದೈನಂದಿನ ಚಟುವಟಿಕೆಗಳನ್ನು ಇನ್ನಷ್ಟು ಉತ್ಸಾಹದಿಂದ ಮಾಡಲಿದ್ದೀರಿ. ವೈವಾಹಿಕ ಜೀವನದ ಕಡೆಗೆ ಹೆಚ್ಚು ಲಕ್ಷ್ಯ ನೀಡಿ. ಸಂಗಾತಿಯ ಅಗತ್ಯಗಳಿಗೆ ಸ್ಪಂದಿಸಿ. ಪ್ರೀತಿಪಾತ್ರರ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ಶುಭದಿನ 20. ಸೌಂದರ್ಯ ಲಹರಿ ಪಠಿಸಿರಿ.




ನಿಮ್ಮ ಆತ್ಮವಿಶ್ವಾಸ ಹೆಚ್ಚಾಗಲಿದೆ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಈ ಹಿಂದಿನ ಭಿನ್ನಾಭಿಪ್ರಾಯಗಳು ಬಗೆಹರಿಯಲಿವೆ. ಈ ವಾರ ನಿಮ್ಮ ಪಾಲಿಗೆ ಅದೃಷ್ಟ ಕೈ ಹಿಡಿಯಲಿದೆ. ವ್ಯಾಪಾರದಲ್ಲಿ ನಿಮ್ಮ ಸ್ಥಿತಿ ಉತ್ತಮವಾಗಿರುತ್ತದೆ. ಕುಟುಂಬಕ್ಕೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡಲಿದ್ದೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ: 21. ಲಕ್ಷ್ಮೀನರಸಿಂಹ ಜಪ ಮಾಡಿರಿ.




ಆಸ್ತಿ ವ್ಯವಹಾರಗಳಲ್ಲಿ ಪ್ರಗತಿ ಕಾಣಿಸಿಕೊಳ್ಳಲಿದೆ. ಕಿರು ಪ್ರಯಾಣ ಕೈಗೊಳ್ಳುವ ಯೋಗ ಇದೆ. ವೃತ್ತಿ ಅಗತ್ಯಗಳಿಗೆ ಈ ಪ್ರಯಾಣ ಅನಿವಾರ್ಯ ಆಗಲಿದೆ. ನಿಮ್ಮ ಧೈರ್ಯ ಹೆಚ್ಚಾಗಲಿದೆ. ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೆಚ್ಚಾಗಲಿದೆ. ಸ್ಪರ್ಧಾತ್ಮಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಇರುವವರಿಗೆ ಕನಸಿನ ಗುರಿ ಮುಟ್ಟಲು ಸೂಕ್ತ ಅವಕಾಶ ದೊರೆಯಲಿದೆ. ಶುಭದಿನ: 20. ವಿಷ್ಣು ಸಹಸ್ರನಾಮ ಪಠಿಸಿರಿ.




ಉದ್ಯೋಗ ಹಾಗೂ ವ್ಯಾಪಾರದಲ್ಲಿ ಯಶಸ್ಸು ಪಡೆಯಲಿದ್ದೀರಿ. ಕೌಟುಂಬಿಕ ವಿಷಯಗಳಲ್ಲಿ ಮುಖ್ಯ ತೀರ್ಮಾನ ಮಾಡಲಿದ್ದೀರಿ. ಇತ್ತೀಚೆಗೆ ನೀವು ಅನುಭವಿಸಿದ ನಷ್ಟವನ್ನು ಮತ್ತೆ ಭರಿಸಲು ಎಲ್ಲ ಪ್ರಯತ್ನವನ್ನು ಮಾಡಲಿದ್ದೀರಿ. ಸಂಗಾತಿ ಹಾಗೂ ಮಕ್ಕಳ ಜೊತೆಗೆ ಉತ್ತಮ ಸಮಯ ಕಳೆಯಲಿದ್ದೀರಿ. ಸಮಾಜದಲ್ಲಿ ಉತ್ತಮ ಹೆಸರು, ಕೀರ್ತಿಯನ್ನು ಪಡೆಯಲಿದ್ದೀರಿ. ಶುಭದಿನ 19. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಪೋಷಕರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಬಹಳ ಸಮಯದಿಂದ ಎದುರು ನೋಡುತ್ತಿದ್ದ ಆಸ್ತಿ ವ್ಯವಹಾರದಲ್ಲಿ ಪ್ರಗತಿ ಕಾಣಲಿದೆ. ಸ್ಥಿರವಾದ ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಾಗಿ ಪರಿಣಮಿಸಲಿದೆ. ಕಾನೂನು ವ್ಯಾಜ್ಯಗಳು ಇದ್ದಲ್ಲಿ ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಸಿಟ್ಟನ್ನು ಸಹಿಸಬೇಕಾಗುತ್ತದೆ. ಶುಭದಿನ: 18. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಹಣಕಾಸು ಲಾಭ ಗಳಿಸುವ ಯೋಗ ಇದೆ. ನಿಮ್ಮ ಜ್ಞಾನ ಹಾಗೂ ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಸಹೋದ್ಯೋಗಿಗಳ ಜೊತೆ ಉತ್ತಮ ಬಾಂಧವ್ಯ ಇರಲಿದೆ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಕಾಣಲಿದ್ದೀರಿ. ಆದರೆ ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಖರ್ಚಿನ ಪ್ರಮಾಣ ಹೆಚ್ಚಾಗಲಿದೆ. ಶುಭದಿನ: 17. ಚಂಡಿ ಪಾರಾಯಣ ಮಾಡಿರಿ.




ಸಹೋದ್ಯೋಗಿಗಳ ಬೆಂಬಲ ನಿಮಗೆ ದೊರೆಯಲಿದೆ. ದೈಹಿಕ ಕ್ಷಮತೆ ಉತ್ತಮವಾಗಿರುತ್ತದೆ. ಸಮಾಜದಲ್ಲಿ ಪ್ರಭಾವಿಗಳಾಗಲಿದ್ದೀರಿ. ಸಂಗಾತಿ ಮಕ್ಕಳ ಮೇಲೆ ನಿಮ್ಮ ಅಕ್ಕರಾಸ್ಥೆ ಹೆಚ್ಚಾಗಲಿದೆ. ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ ಲಾಭದ ಪ್ರಮಾಣ ಹೆಚ್ಚಾಗಲಿದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಚಾರದಲ್ಲಿ ಪ್ರಗತಿ ಇದೆ. ನಿಮ್ಮ ಗುರಿ ತಲುಪುವ ನಿಟ್ಟಿನಲ್ಲಿ ಆಲಸ್ಯವನ್ನು ಬಿಡಬೇಕಾಗುತ್ತದೆ. ಶುಭದಿನ: 20. ದತ್ತಗುರು ಚರಿತ್ರೆ ಪಠಿಸಿರಿ.




ಈ ಅವಧಿಯಲ್ಲಿ ಅದೃಷ್ಟ ನಿಮ್ಮ ಪಾಲಿಗೆ ಇರಲಿದೆ. ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಇದೆ. ಅದೇ ರೀತಿ ಸರ್ಕಾರಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಏಳ್ಗೆ ಇದೆ. ಅನುಭವಿಗಳ ಮಾರ್ಗದರ್ಶನದಿಂದ ಹೊಸ ಕೌಶಲ, ತಂತ್ರಗಳನ್ನು ಕಲಿಯಲು ಸಾಧ್ಯವಾಗುತ್ತದೆ. ತಾತ್ಕಾಲಿಕ ಉದ್ಯೋಗ ಮಾಡುತ್ತಿರುವವರಿಗೆ ಕಾಯಂ ಆಗುವ ಯೋಗ ಇದೆ. ಶುಭದಿನ: 21. ಲಲಿತಾ ಸಹಸ್ರನಾಮ ಪಠಿಸಿರಿ.




ಹೂಡಿಕೆ, ವಿದೇಶ ವ್ಯವಹಾರಗಳು ಲಾಭದಾಯಕವಾಗಿ ಇರಲಿವೆ. ಕಾನೂನು ವ್ಯವಹಾರಗಳಲ್ಲಿ ನಿಮ್ಮ ಕೈ ಮೇಲಾಗಲಿದೆ. ಪ್ರತಿಸ್ಪರ್ಧಿಗಳು ಸವಾಲೊಡ್ಡಬಹುದು. ಆದ್ದರಿಂದ ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ದೊಡ್ಡ ಸಂಸ್ಥೆಗಳ ಜತೆಗೆ ವೃತ್ತಿಪರ ಒಪ್ಪಂದಕ್ಕೆ ಬರುವ ಅವಕಾಶಗಳು ಇವೆ. ಸಂಗಾತಿ ಹಾಗೂ ಮಕ್ಕಳ ಜತೆಗೆ ಸಂತೋಷವಾದ ಸಮಯ ಕಳೆಯಲಿದ್ದೀರಿ. ಶುಭದಿನ: 22. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಸಂಗಾತಿ ಜೊತೆಗೆ ಸಂಬಂಧ ಗಾಢವಾಗಲಿದೆ. ಕೌಟುಂಬಿಕ ಜೀವನದಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳಲಿದ್ದೀರಿ. ಸಮಾಜದ ಪ್ರಮುಖರು ನಿಮ್ಮ ಪರಿಶ್ರಮ ಗುರುತಿಸಲಿದ್ದಾರೆ. ಸಂಸ್ಥೆಗಳಲ್ಲಿ ಮುಖ್ಯ ಹುದ್ದೆಯಲ್ಲಿ ಇರುವವರಿಗೆ ಹಿಡಿತ ಗಟ್ಟಿ ಮಾಡಿಕೊಳ್ಳಲು ಅವಕಾಶ ದೊರೆಯಲಿದೆ. ವಾರಾಂತ್ಯಕ್ಕೆ ನಾನಾ ಮೂಲಗಳಿಂದ ಸಕಾರಾತ್ಮಕ ಬೆಳವಣಿಗೆ ಕಾಣಲಿದ್ದೀರಿ. ಶುಭದಿನ: 19. ಲಕ್ಷ್ಮಿ ಕನಕಧಾರಾ ಸ್ತೋತ್ರ ಪಠಿಸಿರಿ.




ಸೋದರರ ಜೊತೆ ಬಾಂಧವ್ಯ ಗಟ್ಟಿಯಾಗಲಿದೆ. ವೃತ್ತಿಪರ ಕಾರಣಗಳಿಗಾಗಿ ಪ್ರಯಾಣ ಮಾಡಬೇಕಾಗುತ್ತದೆ. ಅನಗತ್ಯ ತಡೆ ಒಡ್ಡುವ ಪ್ರತಿಸ್ಪರ್ಧಿಗಳು, ಅಡ್ಡಗಾಲು ಹಾಕುತ್ತಾರೆ. ಸ್ಥಿರವಾದ ಆರೋಗ್ಯ ಹಾಗೂ ದೃಢತೆ ಕಾಯ್ದುಕೊಳ್ಳುವುದು ಸವಾಲಾಗಿ ಪರಿಣಮಿಸಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಕ್ರಿಯೇಟಿವ್ ಕಾರ್ಯ ನಿರ್ವಹಿಸುವವರಿಗೆ ಪ್ರಗತಿ ಇದೆ. ಶುಭದಿನ: 17. ಶಿವಕವಚ ಪಠಿಸಿರಿ.